ತುಂಬಿಕೊಂಡಿದ್ದರು. ಅಷ್ಟೇ ಅಲ್ಲ, ಆರು ತಿಂಗಳು ಕೋಚ್ ಜತೆ ಟೂ ಬಿಟ್ಟಿದ್ದರು.

ಬೋಕಾ ಜೂನಿಯರ್ಸ್ ಕ್ಲಬ್ 1980–81ರಲ್ಲಿ ಮರಡೋನಾ ಜತೆ ಒಪ್ಪಂದ ಮಾಡಿಕೊಂಡಿತು. ಆಮೇಲೆ 1982ರಲ್ಲಿ ಹೆಸರಾಂತ ಬಾರ್ಸಿಲೋನಾ ಕ್ಲಬ್ ಎಳೆದುಕೊಂಡಿತು. ಅದಕ್ಕಾಗಿ ಆಗಲೇ 90 ಲಕ್ಷ ಡಾಲರ್ ಹಣ ವ್ಯಯಿಸಿತ್ತು.

ಮರಡೋನಾ ಉತ್ಕಟ ಆಟಗಾರನೇನೋ ಹೌದು. 1982ರಲ್ಲಿ ಅದು ಸಾಬೀತಾಗಲು ಬೇಕಾದ ಚುರುಕುಮತಿಯೂ ಇತ್ತೆನ್ನಿ. ಇಟಲಿಯ ಕ್ಲಾಡಿಯೊ ಜಂಟಲ್ ಈ ಆಟಗಾರನನ್ನು ಗುರಿಯಾಗಿಸಿಕೊಂಡು ಮಂಡಿ, ಪಾದದ ಕೀಲುಗಳೆಲ್ಲ ನೋವಿನಿಂದ ನರಳುವಂತೆ ಒದ್ದರು. ಇದನ್ನೇ ಪಾಠವೆಂದು ಭಾವಿಸಿದ ಮರಡೋನಾ, ಬ್ರೆಜಿಲ್ ವಿರುದ್ಧದ ಪಂದ್ಯದಲ್ಲಿ ಆಟಗಾರ ತಡೆಯಲು ಬಂದಾಗ ಒದೆಯುವ ತಂತ್ರ ಪ್ರಯೋಗಿಸಲು ಹೋಗಿ ತಂಡವೇ ಹೊರಬರಲು ಕಾರಣನಾಗಿಬಿಟ್ಟರು. ಆಗ ಅವರಿಗೆ ಎದುರಾದ ಟೀಕೆಗಳು ಒಂದೆರಡಲ್ಲ.



1986ರಲ್ಲಿ ವಿಶ್ವಕಪ್ ಗೆದ್ದಾಗ...

ಇಟಲಿಯ ಆಟಗಾರನಿಂದ ಒದೆಸಿಕೊಂಡರೂ ಆ ದೇಶದ ನೇಪಲ್ಸ್ ಕ್ಲಬ್‌ನಿಂದ ಆಹ್ವಾನ ಪಡೆದುಕೊಂಡಿದ್ದು ಅಡಿಗೆರೆ ಎಳೆಯಬೇಕಾದ ಸಂಗತಿ. 1984ರಲ್ಲಿ ನೇಪಲ್ಸ್ ಕ್ಲಬ್‌ಗೆ ಸೇರಿದ ಸಮಾರಂಭ ಕಣ್ತುಂಬಿಕೊಳ್ಳಲು 85 ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ಆ ಕ್ಲಬ್ ಚಕಚಕನೆ ಮೇಲೇರಲು ಕಾರಣವಾಗುವಂಥ ಪ್ರದರ್ಶನ ಮರಡೋನಾ ಅವರಿಂದ ಮೂಡಿಬಂತು.

1986ರ ಹೊತ್ತಿಗೆ ಮರಡೋನಾ ಅರ್ಜೆಂಟೀನಾದ ಕಣ್ಮಣಿ. ಈ ಆಟಗಾರನನ್ನು ನಿಯಂತ್ರಿಸಿದರೆ ಗೆಲ್ಲಬಹುದು ಎಂಬ ತಂತ್ರವನ್ನು ವಿಶ್ವದ ಬಹುತೇಕ ತಂಡಗಳು ತಮ್ಮದಾಗಿಸಿಕೊಂಡವು. ದಕ್ಷಿಣ ಕೊರಿಯಾ ಆಟಗಾರರು ಮೊದಲ ಸುತ್ತಿನ ಪಂದ್ಯದಲ್ಲೇ ಪದೇ ಪದೇ ಬೀಳಿಸಿದರು. ಹಾಗಿದ್ದೂ ಮೂರು ಗೋಲುಗಳು ತಮ್ಮ ತಂಡಕ್ಕೆ ಜಮೆಯಾಗುವಂತೆ ಮರಡೋನಾ ಆಟವಾಡಿದ್ದನ್ನು ಮರೆಯಲಾಗದು. ಕ್ವಾರ್ಟರ್ ಫೈನಲ್‌ನಲ್ಲಿ ಇಂಗ್ಲೆಂಡ್ ಎದುರಾಳಿ. 51 ನಿಮಿಷದವರೆಗೆ ಒಂದೂ ಗೋಲ್ ಬಂದಿರಲಿಲ್ಲ. ಗೋಲು ಪೆಟ್ಟಿಗೆಯ ಬಳಿ ಮೇಲಕ್ಕೇರಿದ ಚೆಂಡನ್ನು ಕಂಡ ಮರಡೋನಾ, ಇಂಗ್ಲೆಂಡ್‌ನ ಗೋಲ್‌ಕೀಪರ್ ಪೀಟರ್ ಶಿಲ್ಟನ್ ಸಮಕ್ಕೂ ಜಿಗಿದರು. ಚೆಂಡನ್ನು ಮೆಲ್ಲಗೆ ಎಡಗೈನಿಂದ ಸವರಿ ಗೋಲು ಪೆಟ್ಟಿಗೆ ಸೇರಿಸಿಬಿಟ್ಟರು. ಅದು ತಲೆಯಿಂದಲೇ ಹೊಮ್ಮಿರಬೇಕು ಎಂದು ಟ್ಯುನಿಸಿಯಾದ ರೆಫರಿ ಅಲಿ ಬೆನ್ ನಕಿಯರ್ ಆಗ ಭಾವಿಸಿದರು. ಈಗಿನಂತೆ ಕ್ಯಾಮೆರಾ ತಂತ್ರಜ್ಞಾನ ಆಗ ಬೆಳೆದಿರಲಿಲ್ಲವಾದರೂ ಅದು ಮೋಸದಾಟ ಎನ್ನುವುದು ಎಂಥವರಿಗೂ ಗೊತ್ತಾಯಿತು. ಆ ಆಘಾತದಿಂದ ಇಂಗ್ಲೆಂಡ್ ಕಂಗಾಲಾದಂತೆ ಕಂಡಿತು. ಅದರ ಲಾಭ ಪಡೆದದ್ದೇ ಸಾಕಷ್ಟು ದೂರ ಚೆಂಡನ್ನು ಡ್ರಿಬಲ್ ಮಾಡುತ್ತಾ ಐವರ ರಕ್ಷಣಾ ತಂತ್ರವನ್ನು ಭೇದಿಸಿ ಇನ್ನೊಂದು ಗೋಲನ್ನು ಮರಡೋನಾ ಗಳಿಸಿಕೊಟ್ಟು, ಹಳೆಯ ಮೋಸದ ಆಟಕ್ಕೆ ತೇಪೆ ಹಚ್ಚಿದ್ದೂ ಸುಳ್ಳಲ್ಲ. ಆ ಗೋಲು ಹೊಮ್ಮಿದ ಬಗೆಯನ್ನು ಈಗಲೂ ಎಷ್ಟೋ ಜನ ವಿಡಿಯೊಗಳಲ್ಲಿ ನೋಡಿ ಆಸ್ವಾದಿಸುತ್ತಾರೆ. ಬಿಬಿಸಿ ವೀಕ್ಷಕ ವಿವರಣೆಕಾರ ಬ್ಯಾರಿ ಡೇವಿಸ್ ಎರಡನೇ ಗೋಲನ್ನು ಪವಾಡ ಎಂದೇ ಬಣ್ಣಿಸಿದ್ದರು.

ಸೆಮಿಫೈನಲ್‌ನಲ್ಲಿ ಬೆಲ್ಜಿಯಂನ ಪ್ರಬಲ ಆಟಗಾರರ ರಕ್ಷಣೆಯನ್ನು ಎದುರಿಸಿ ಎರಡು ಗೋಲುಗಳನ್ನು ಮರಡೋನಾ ಗಳಿಸಿದ ರೀತಿ ಅದ್ಭುತ. ಫೈನಲ್‌ನಲ್ಲಿ ತಾನು ಗೋಲು ಗಳಿಸದೇ ಇದ್ದರೂ ಅದಕ್ಕೆ ಬೇಕಾದ ಪಾಸ್‌ಗಳನ್ನು ಕೊಡುತ್ತಾ ಜರ್ಮನಿಯನ್ನು ಮಣಿಸಲು ಕಾರಣರಾದರು.

ಇಂಥದೊಂದು ಆಟ ತೋರಿದ ನಾಲ್ಕು ವರ್ಷಗಳ ನಂತರ ಕೆಟ್ಟ ದಿನಗಳನ್ನು ಆಟಗಾರ ನೋಡಬೇಕಾಯಿತು.

ಇಟಲಿಯಲ್ಲಿ 1990ರಲ್ಲಿ ನಡೆದ ವಿಶ್ವಕಪ್ ಟೂರ್ನಿಯ ಆರಂಭದಲ್ಲೇ ಕೆಮರೂನ್ ವಿರುದ್ಧ ಚಾಂಪಿಯನ್ ಅರ್ಜೆಂಟೀನಾ ಸೋತಿತು. ದುರ್ಬಲವಾಗಿದ್ದ ಅರ್ಜೆಂಟೀನಾ ಪಾಲಿಗೆ ಇದ್ದದ್ದು ಮರಡೋನಾ ನಾಮಬಲವೊಂದೇ. ಕೊನೆಗೂ ಫೈನಲ್‌ವರೆಗೆ ತಂಡ ಹೋಗುವಂತೆ ನೋಡಿಕೊಂಡರೂ ಪೆನಾಲ್ಟಿಯ ಅವಕಾಶ ಎದುರಾಳಿ ತಂಡಕ್ಕೆ ಕೊಟ್ಟ ರೆಫರಿಯ ವಿವಾದಾತ್ಮಕ ತೀರ್ಪು ಮುಳುವಾಯಿತು. ಆ ಟೂರ್ನಿಯಲ್ಲಿ ಸೋತಮೇಲೆ ಮರಡೋನಾ ಗೋಳೋ ಎಂದು ಅತ್ತಿದ್ದರು.

ನೇಪಲ್ಸ್ ತಂಡ ಮರಡೋನಾಗೆ ಪ್ರಭಾವಳಿ ಕೊಟ್ಟಿದ್ದರ ಜತೆ ಮೋಜಿನ ಅಮಲನ್ನೂ ಉಣಿಸಿತ್ತು. ಸಾಕರ್ ಹಾಗೂ ಜೂಜಿಗೆ ಇಟಲಿಯಲ್ಲಿ ಸಾವಯವ ಸಂಬಂಧ. ಇನ್ನೊಂದು ಕಡೆ ಮಾಫಿಯಾಗಳ ಕಬಂಧಬಾಹುಗಳು. ಇವೆಲ್ಲವುಗಳಲ್ಲಿ ಮರಡೋನಾ ಖ್ಯಾತಿ ಕಿರೀಟದ ಸಮೇತ ಸಿಲುಕಿಕೊಂಡರು. ಮದ್ಯ, ಮಾದಕದ್ರವ್ಯಗಳು ಒತ್ತಡದ ನೊಗವನ್ನು ಇಳಿಸಲು ದಾರಿಗಳಾದವು. 1991ರಲ್ಲಿ ಕೊಕೇನ್ ಪತ್ತೆಯಾದದ್ದೇ 14 ತಿಂಗಳ ಜೈಲು ಶಿಕ್ಷೆಯಾಯಿತು. ಆಮೇಲೆ ತವರಿಗೆ ಮರಳಿದರೆ ಅಲ್ಲಿಯೂ ನ್ಯಾಯಾಲಯದಿಂದ ಶಿಕ್ಷೆ.

1994ರಲ್ಲಿ ಅಮೆರಿಕದಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಮರಡೋನಾ ಮತ್ತೆ ಕಣ್ಮಣಿ. ಮೊದಲ ಆಟದಲ್ಲಿ ಹಳೆಯ ಮರಡೋನಾ ಕಂಡದ್ದೇನೋ ಹೌದು. ಪಂದ್ಯ ಮುಗಿದ ಮೇಲೆ ನಡೆಸಿದ ಪರೀಕ್ಷೆಯಲ್ಲಿ ಮಾದಕವಸ್ತುಗಳನ್ನು ಸೇವಿಸುತ್ತಿದ್ದುದು ಪತ್ತೆಯಾಯಿತು. ಟೂರ್ನಿಯಿಂದಲೇ ಅಮಾನತುಗೊಂಡರು.

ಮಾದಕದ್ರವ್ಯ ವ್ಯಸನದಿಂದ ಹೊರಬರಲು ಅದರ ವಿರುದ್ಧದ ಹೋರಾಟದಲ್ಲೂ ಖುದ್ದು ಭಾಗಿಯಾದ ಮರಡೋನಾ ಇನ್ನಿಲ್ಲದಂತೆ ತಮ್ಮನ್ನು ತಾವು ಮತ್ತೆ ಕಂಡುಕೊಳ್ಳಲು ಯತ್ನಿಸಿದರು. 1997ರಲ್ಲಿ ಬೋಕಾ ಜೂನಿಯರ್ಸ್ ಕ್ಲಬ್ ಜತೆ ಒಪ್ಪಂದವೂ ಸಾಧ್ಯವಾಯಿತು. ಅದೇ ವರ್ಷ ನಡೆದ ಪಂದ್ಯವೊಂದರಲ್ಲಿ ಮತ್ತೆ ಗೋಲು ಗಳಿಸಿದಾಗ ಆಶಾವಾದದ ಬೆಳ್ಳಿಮಿಂಚು. ದುರಂತವೆಂದರೆ, ಆಗ ನಡೆದ ಪರೀಕ್ಷೆಯಲ್ಲೂ ಮಾದಕದ್ರವ್ಯಗಳ ಸೇವನೆಯಾಗಿದ್ದುದು ದೃಢಪಟ್ಟಿತು. ಅರ್ಜೆಂಟೀನಾ ಹಾಗೂ ಅಂತಾರಾಷ್ಟ್ರೀಯ ಫುಟ್‌ಬಾಲ್ ಒಕ್ಕೂಟ ಜೀವನ ಪರ್ಯಂತ ನಿಷೇಧ ಹೇರಿದವು.

ಸಾಕರ್‌ನಲ್ಲಿ ಮಿಡ್‌ಫೀಲ್ಡರ್ ಆಗಿಯೂ ಸ್ಟ್ರೈಕರ್‌ಗಳನ್ನೂ ನಾಚಿಸಿದ ಮರಡೋನಾ, ಬದುಕಿನ ಮಹತ್ವದ ಸಂದರ್ಭಗಳಲ್ಲೆಲ್ಲ ಅವೆರಡೂ ಆಗಲಾರದೆ ಹೋದರು. ಪೆಲೆ ದಶಕಗಟ್ಟಲೆ ತಮ್ಮ ಶಿಸ್ತಿನಿಂದ ಜನಮನದಲ್ಲಿ ಉಳಿದರೆ, ಮರಡೋನಾ ಅಪರಾತಪರಾ ಪ್ರತಿಭೆಯಾಗಿ ಆಗೀಗ ಅಭಿಮಾನಿಗಳ ಚರ್ಚೆಗೆ ಪಕ್ಕಾದರು. ಕೈಕೊಡುತ್ತಾ ಹೋದ ಆರೋಗ್ಯದ ವಿರುದ್ಧ ಅವರು ವರ್ಷಗಟ್ಟಲೆ ಸಾಕರ್ ಆಡಿದ್ದೂ ನಿಜ. ಆಟದ ಉತ್ಕಟತೆ, ದ್ರವ್ಯಗಳ ಅಮಲು ಎರಡರ ನಡುವೆಯೂ ಅವರ 'ಹ್ಯಾಂಡ್ ಆಫ್ ಗಾಡ್' ಈಗ ದೇವರಿಗೇ ಸೇರಿದೆ!